## PART – III
# CHILD DEVELOPMENT AND PEDAGOGY

61. ಮೆದುಳನ್ನು ಕಾರ್ಯ ಪಟುತ್ವಗೊಳಿಸುವ ತಂತ್ರವನ್ನು ಈ ವಿದ್ಯಾರ್ಥಿಗಳಿಗೆ ಉಪಯೋಗಿಸುವರು.
    (1) ಮಂದಗತಿಯಲ್ಲಿ ಕಲಿಯುವವರು (2) ಸೃಜನಶೀಲ ಮಕ್ಕಳು
    (3) ಮಾನಸಿಕ ಸವಾಲುಳ್ಳ ಮಕ್ಕಳು (4) ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳು

62. ಕಲಿಕೆಯಲ್ಲಿ ಹಿಂದುಳಿವಿಕೆಯು ಕೆಳಗಿನ ಒಂದನ್ನು ಬಿಟ್ಟು ಯಾವುದರಿಂದಲಾದರೂ ಉಂಟಾಗಬಹುದು.
    (1) ಶಿಕ್ಷಕರ ಬೋಧನಾ ರೀತಿಯಿಂದ
    (2) ಮಂದಬುದ್ಧಿಯಿಂದ
    (3) ಪ್ರಸವಪೂರ್ವ ಹಂತದಲ್ಲಿ ಮದ್ಯಪಾನ ಮಾಡುವುದರಿಂದ
    (4) ಶೈಶವಾವಸ್ಥೆಯಲ್ಲಿನ ಮಾನಸಿಕ ಕಾಯಿಲೆಯಿಂದ

63. ಸುಮಂತನು ಆಟದ ಸಾಮಾನುಗಳನ್ನು ಒಡೆದು ಅದರಲ್ಲಿರುವ ಭಾಗಗಳನ್ನು ತಿಳಿಯಲು ಬಿಚ್ಚುತ್ತಾನೆ. ನೀವು ಏನು ಮಾಡುವಿರಿ ?
    (1) ಅವನ ಕುತೂಹಲವನ್ನು ಪ್ರೋತ್ಸಾಹಿಸಿ ಅವನ ಶಕ್ತಿಯನ್ನು ಉದಾತ್ತೀಕರಿಸುವಿರಿ
    (2) ಸುಮಂತನನ್ನು ಆಟವಾಡುವುದಕ್ಕೆ ಬಿಡುವುದೇ ಇಲ್ಲ
    (3) ಯಾವಾಗಲೂ ಹತ್ತಿರದಿಂದ ವೀಕ್ಷಿಸುತ್ತೀರಿ
    (4) ಅವನಿಗೆ ಆಟದ ಸಾಮಾನುಗಳನ್ನು ಒಡೆದು ಹಾಕಬಾರದೆಂದು ಅರ್ಥಮಾಡಿಸುವಿರಿ

64. ಕೆಲವು ಕಹಿ ಅನುಭವಗಳ ನಂತರ ಮಗುವೊಂದು ಶಿಕ್ಷಕರನ್ನು ದ್ವೇಷಿಸಲು ಪ್ರಾರಂಭಿಸುತ್ತದೆ. ಇದು ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?
    (1) ಜ್ಞಾನಾತ್ಮಕ ವರ್ತನೆ (2) ಕ್ರಿಯಾಜನ್ಯ ವರ್ತನೆ
    (3) ಭಾವನಾತ್ಮಕ ವರ್ತನೆ (4) ಪ್ರತಿಫಲನಾತ್ಮಕ ವರ್ತನೆ

65. ಈ ಕೆಳಗಿನವುಗಳಲ್ಲಿ ಯಾವುದು ಮಕ್ಕಳ ಮಾನಸಿಕ ಆರೋಗ್ಯವನ್ನು ಕಾಪಾಡುವಲ್ಲಿ ಶಿಕ್ಷಕನಿಗೆ ಸಹಕಾರಿಯಾಗಿದೆ ?
    (1) ಅತಿಯಾದ ಶಿಸ್ತನ್ನು ಜಾರಿಗೊಳಿಸುವುದು (2) ಅನಾರೋಗ್ಯಕರ ಸ್ಪರ್ಧೆಯನ್ನು ತಡೆಗಟ್ಟುವುದು
    (3) ಬೇರೆ ಮಕ್ಕಳೊಂದಿಗೆ ಹೋಲಿಸುವುದು (4) ಸಂಪೂರ್ಣತೆಗೆ ಅತಿಯಾದ ಒತ್ತು ನೀಡುವುದು

66. 'ಪರೀಕ್ಷೆಯಲ್ಲಿ ಅನುತ್ತೀರ್ಣನಾದ ವಿದ್ಯಾರ್ಥಿ, ಶಿಕ್ಷಕರು ಸರಿಯಾಗಿ ಪಾಠ ಮಾಡಿಲ್ಲವೆಂದು ಹೇಳುವುದು' ಈ ಹೊಂದಾಣಿಕೆಯ ತಂತ್ರಕ್ಕೆ ಉದಾಹರಣೆಯಾಗಿದೆ.
    (1) ಪರಿಹಾರ (2) ಉದಾತ್ತೀಕರಣ (3) ಪ್ರಕ್ಷೇಪಣೆ (4) ಪ್ರತಿಗಮನ

67. ಸಮಸ್ಯಾತ್ಮಕ ವರ್ತನೆಯ ವಿದ್ಯಾರ್ಥಿಗಳನ್ನು ಅಧ್ಯಯನ ಮಾಡಲು ಉಪಯೋಗಿಸುವ ವಿಧಾನ
    (1) ವ್ಯಕ್ತಿ ಅಧ್ಯಯನ (2) ಅಂತರಾವಲೋಕನ
    (3) ಪ್ರಾಯೋಗಿಕ (4) ಅವಲೋಕನ



www.kpscvaani.com

68. ಈ ಹಂತವನ್ನು 'ಬೆಳವಣಿಗೆಯ ಬುಗ್ಗೆ' ಎಂದು ಕರೆಯುವರು

(1) ಪೂರ್ವ ಬಾಲ್ಯಾವಸ್ಥೆ (2) ಉತ್ತರ ಬಾಲ್ಯಾವಸ್ಥೆ

(3) ತಾರುಣ್ಯಾವಸ್ಥೆ (4) ಶೈಶವಾವಸ್ಥೆ

69. ಸೃಜನಶೀಲತೆಯ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಹಂತಗಳ ಅನುಕ್ರಮವು

(1) ಸಿದ್ಧತೆ, ಪರಿಪಾಕಾವಸ್ಥೆ, ಜ್ಞಾನೋದಯ, ತಾಳೆ ನೋಡುವಿಕೆ

(2) ತಾಳೆ ನೋಡುವಿಕೆ, ಜ್ಞಾನೋದಯ, ಸಿದ್ಧತೆ, ಪರಿಪಾಕಾವಸ್ಥೆ

(3) ಜ್ಞಾನೋದಯ, ತಾಳೆ ನೋಡುವಿಕೆ, ಸಿದ್ಧತೆ, ಪರಿಪಾಕಾವಸ್ಥೆ

(4) ಪರಿಪಾಕಾವಸ್ಥೆ, ಸಿದ್ಧತೆ, ಜ್ಞಾನೋದಯ, ತಾಳೆ ನೋಡುವಿಕೆ

70. ಮಾನಸಿಕ ವಯಸ್ಸು 15 ಇರುವ ಓರ್ವ ಹುಡುಗಿಯ I.Q. 125 ಇದ್ದರೆ ಅವಳ ದೈಹಿಕ ವಯಸ್ಸು ಎಷ್ಟು ?

(1) 10 (2) 14 (3) 16 (4) 12

71. ಈ ಕೆಳಗಿನವುಗಳಲ್ಲಿ ಯಾವುದು ಸುಖಾನ್ವೇಷಣ ತತ್ವದ ಪ್ರಕಾರ ಕೆಲಸ ನಿರ್ವಹಿಸುತ್ತದೆ ?

(1) ಇದ್ (2) ಅಹಂ

(3) ಅತ್ಯಹಂ (4) ಜಾಗೃತಪೂರ್ವ ಮನಸ್ಸು

72. ಈ ಕೆಳಗಿನವುಗಳಲ್ಲಿ ಯಾವುದು ಮನೋಜನ್ಯ ಚಲನವಲಯದ ಅತ್ಯಂತ ಉನ್ನತ ಮಟ್ಟದ ಸಾಧನೆ ?

(1) ಸ್ಫುಟತೆ (ಆರ್ಟಿಕ್ಯುಲೇಷನ್) (2) ಮೌಲ್ಯಮಾಪನ

(3) ಸ್ವಾಭಾವೀಕರಣ (4) ಅನುಕರಣೆ

73. ಕೆಳಗಿನ ಯಾವ ಒಂದು ಜೊತೆಯ ಅಂಶಗಳನ್ನು ಒಂದೇ ನಾಣ್ಯದ ಎರಡು ಮುಖಗಳು ಎಂದು ಪರಿಗಣಿಸಲಾಗಿದೆ ?

(1) ಆಸಕ್ತಿ ಮತ್ತು ಅವಧಾನ (ಎಚ್ಚರಿಕೆ) (2) ಆಸಕ್ತಿ ಮತ್ತು ಪರಿಪಕ್ವತೆ

(3) ಪರಿಪಕ್ವತೆ ಮತ್ತು ಪ್ರೇರಣೆ (4) ಮನೋಭಾವ ಮತ್ತು ಪರಿಪಕ್ವತೆ

74. ಕೆಳಗಿನ ಯಾವುದನ್ನು 'ಸಂಶೋಧಕನ ಕಣ್ಣು' ಎಂದು ಕರೆಯುತ್ತಾರೆ ?

(1) ಸಂಭವನೀಯ ಕಾರಣಗಳ ವಿಶ್ಲೇಷಣೆ (2) ನಿರ್ದಿಷ್ಟಗೊಳಿಸಿದ ಸಮಸ್ಯೆ

(3) ಕಾರ್ಯ ಯೋಜನೆ (4) ಕ್ರಿಯಾ ಪ್ರಾಕಲ್ಪನೆ

75. ಈ ಹಂತದ ಜ್ಞಾನಾತ್ಮಕ ಬೆಳವಣಿಗೆಯಲ್ಲಿ ತಾರ್ಕಿಕ ಚಿಂತನೆ ಸಂಪೂರ್ಣವಾಗಿ ವಿಕಾಸಗೊಳ್ಳುತ್ತದೆ.

(1) ಸಂವೇದನಾಗತಿ ಹಂತ (2) ಮೂರ್ತಕಾರ್ಯಗಳ ಹಂತ

(3) ಔಪಚಾರಿಕ ಕಾರ್ಯಗಳ ಹಂತ (4) ಕಾರ್ಯಪೂರ್ವ ಹಂತ



www.kpscvaani.com

76. 'ಮಕ್ಕಳು ಚಲನಚಿತ್ರದಲ್ಲಿ ಪ್ರದರ್ಶಿತವಾಗುವ ಹಿಂಸಾತ್ಮಕ ವರ್ತನೆಯನ್ನು ನೋಡಿ ಕಲಿಯಬಹುದು' ಎಂಬ ತೀರ್ಮಾನವನ್ನು ಯಾವ ಮನೋವಿಜ್ಞಾನಿಯು ಮಾಡಿರುವ ಕೆಲಸದ ಆಧಾರದ ಮೇಲೆ ತೀರ್ಮಾನಿಸ-ಬಹುದು ?

(1) ಎಡ್‌ವರ್ಡ್ ಎಲ್. ಥಾರ್ನ್‌ಡೈಕ್ (2) ಜೆ.ಬಿ. ವ್ಯಾಟ್ಸನ್

(3) ಆಲ್‌ಬರ್ಟ್ ಬಂಡೂರ (4) ಜೀನ್ ಪಿಯಾಜೆ

77. ಲಿಂಗ ತಾರತಮ್ಯದ ಬೆಳವಣಿಗೆಯ ಪ್ರಮುಖ ಮೂಲ

(1) ಸಮುದಾಯ (2) ಸಮೂಹ ಮಾಧ್ಯಮ

(3) ಶಾಲೆ (4) ಕುಟುಂಬ

78. ನ್ಯೂನತೆಯುಳ್ಳ ಮಕ್ಕಳಿಗಾಗಿ ಇರುವ ಕೇಂದ್ರೀಯ ನಿಯೋಜಿತ ಸಮಗ್ರ ಶಿಕ್ಷಣದ ಮೂಲಕ ಶೈಕ್ಷಣಿಕ ಅವಕಾಶಗಳನ್ನು ಇಲ್ಲಿ ನೀಡುವ ಗುರಿ ಹೊಂದಿದೆ.

(1) ಸಾಮಾನ್ಯ ಶಾಲೆಗಳು (2) ವಿಶೇಷ ಶಾಲೆಗಳು

(3) ಮುಕ್ತ ಶಾಲೆಗಳು (4) ಅಂಧ ಪರಿಹಾರ ಸಂಘ ಶಾಲೆಗಳು

79. ನೈತಿಕ ಬೆಳವಣಿಗೆಯ ಸಿದ್ಧಾಂತವನ್ನು ಪ್ರತಿಪಾದಿಸಿದವರು

(1) ಕೋಲ್‌ಬರ್ಗ್ (2) ಬಂಡೂರ

(3) ಬ್ರೂನರ್ (4) ಗ್ಯಾನೆ

80. ಬಹುಮುಖ ಬುದ್ಧಿಶಕ್ತಿಯ ಸಿದ್ಧಾಂತದ ಪ್ರಕಾರ ಎಲ್ಲಾ ರೀತಿಯ ಪ್ರಾಣಿಗಳನ್ನು, ಸಸ್ಯಗಳನ್ನು ಹಾಗೂ ಲವಣಗಳನ್ನು ಗುರುತಿಸುವ ಹಾಗೂ ವರ್ಗೀಕರಿಸುವ ಸಾಮರ್ಥ್ಯವನ್ನು ಹೀಗೆ ಕರೆಯುವರು.

(1) ಅಂತರ್‌ವ್ಯಕ್ತ ಬುದ್ಧಿಶಕ್ತಿ (2) ಶಾಬ್ದಿಕ ಭಾಷಾ ಬುದ್ಧಿಶಕ್ತಿ

(3) ತಾರ್ಕಿಕ ಗಣಿತೀಯ ಬುದ್ಧಿಶಕ್ತಿ (4) ಸಹಜ ಬುದ್ಧಿಶಕ್ತಿ

81. ಡಿಸ್‌ಲೆಕ್ಸಿಯಾವು ಇದಕ್ಕೆ ಸಂಬಂಧಿಸಿದ ಸಮಸ್ಯೆಯಾಗಿದೆ

(1) ಓದುವುದು (2) ಮಾತನಾಡುವುದು

(3) ಮಾತನಾಡುವುದು ಮತ್ತು ಆಲಿಸುವುದು (4) ಕೇಳಿಸಿಕೊಳ್ಳುವುದು

82. ಒಬ್ಬ ವಿದ್ಯಾರ್ಥಿಯು ತನ್ನ ಸಹಪಾಠಿಗಳೊಂದಿಗೆ ಒರಟಾಗಿ ವರ್ತಿಸುವನು ಹಾಗೂ ಶಾಲಾ ನಿಯಮಗಳಿಗೆ ಹೊಂದಿಕೊಳ್ಳುವುದಿಲ್ಲ. ಈ ವಿದ್ಯಾರ್ಥಿಗೆ ನೀಡಬೇಕಾದ ಅವಶ್ಯಕ ಸಹಾಯದ ವಲಯ

(1) ಉನ್ನತ ಮಟ್ಟದ ಕೌಶಲಗಳು (2) ಜ್ಞಾನಾತ್ಮಕ ವಲಯ

(3) ಮನೋಜನ್ಯ ಕ್ರಿಯಾವಲಯ (4) ಭಾವನಾತ್ಮಕ ವಲಯ

83. ನೈಜವಾದ ನೈತಿಕ ಪ್ರಜ್ಞೆಯು ವ್ಯಕ್ತವಾಗುವ ಹಂತವು

(1) ತಾರುಣ್ಯಾವಸ್ಥೆ (2) ವಯಸ್ಕ

(3) ಪೂರ್ವ ಬಾಲ್ಯಾವಸ್ಥೆ (4) ಉತ್ತರ ಬಾಲ್ಯಾವಸ್ಥೆ



www.kpscvaani.com

84. ಈ ಹೇಳಿಕೆ 'ಗಂಡಸರು ಹೆಂಗಸರಿಗಿಂತ ಹೆಚ್ಚು ಬುದ್ಧಿವಂತರು'

(1) ನಿಜ
(2) ಸುಳ್ಳು
(3) ಲಿಂಗ ತಾರತಮ್ಯವನ್ನು ತೋರಿಸುತ್ತದೆ
(4) ಕೆಲವು ಜನಾಂಗಗಳಲ್ಲಿ ಸತ್ಯ

85. ಒಂದು ಸಮೂಹದ ಸದಸ್ಯರ ಸಂಬಂಧವನ್ನು ಅಧ್ಯಯನ ಮಾಡಲು ಈ ಕೆಳಗಿನವುಗಳಲ್ಲಿ ಯಾವುದನ್ನು ಬಳಸಲಾಗುತ್ತದೆ ?

(1) ಸಮಾಜ ಮಿತಿ ತಂತ್ರ
(2) ಪ್ರಕ್ಷೇಪಣಾ ತಂತ್ರ
(3) ದರ್ಜಾ ಮಾಪನ
(4) ಸಾಂದರ್ಭಿಕ ಪರೀಕ್ಷೆ

86. ಅನಿಮಿಸಮ್ ಲಕ್ಷಣವು, ಈ ಹಂತದ ಜ್ಞಾನಾತ್ಮಕ ಬೆಳವಣಿಗೆಯ ಮುಖ್ಯ ಲಕ್ಷಣ

(1) ಸಂವೇದನಾ ಗತಿ ಹಂತ
(2) ಕಾರ್ಯಪೂರ್ವ ಹಂತ
(3) ಮೂರ್ತ ಕಾರ್ಯಗಳ ಹಂತ
(4) ಔಪಚಾರಿಕ ಕಾರ್ಯಗಳ ಹಂತ

87. ಪುನರ್ಬಲನದ ಉಪಯೋಗದಿಂದ

(1) ಬುದ್ಧಿಶಕ್ತಿ ಉತ್ತಮಗೊಳ್ಳುತ್ತದೆ
(2) ಸಾಮಾಜಿಕ ಸಂಬಂಧಗಳನ್ನು ಬೆಳಸುತ್ತದೆ
(3) ಮಾನಸಿಕ ಆರೋಗ್ಯ ವೃದ್ಧಿಸುತ್ತದೆ
(4) ಪ್ರತಿಕ್ರಿಯೆಯನ್ನು ಬಲಗೊಳಿಸುತ್ತದೆ

88. ವಿಸ್ಮೃತಿಗೆ ಇದು ಒಂದು ಪ್ರಮುಖ ಕಾರಣವಾಗಿದೆ.

(1) ಭಯ ಮತ್ತು ಆತಂಕದಿಂದ ಆಗುವ ಭಾವನಾತ್ಮಕ ತಡೆ
(2) ಧನಾತ್ಮಕ ವರ್ಗಾವಣೆ
(3) ಮನರಂಜನೆಯ ಕೊರತೆ
(4) ಸಹಪಾಠಿಗಳ ನಡುವೆ ಸ್ಪರ್ಧೆ

89. ಒಂದು ಮಗು ನೂರ ಹತ್ತು ಎಂಬ ಸಂಖ್ಯೆಯನ್ನು 10010 ಎಂದು ಬರೆಯುವುದು. ಈ ದೌರ್ಬಲ್ಯವನ್ನು ಹೀಗೆನ್ನುತ್ತಾರೆ.

(1) ಡಿಸ್‌ಕ್ಯಾಲ್ಸಿಯಾ
(2) ಡಿಸ್‌ಗ್ರಾಫಿಯಾ
(3) ಡಿಸ್‌ಕ್ಯಾಲ್ಕುಲಿಯಾ
(4) ಡಿಸ್‌ಕ್ಯಾಲಿಗ್ರಾಫಿಯಾ

90. ಆಶ್ರಿತ ನ್ಯೂನತೆ ಇರುವ ಮಕ್ಕಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುವವರು

(1) ಮನೋವೈದ್ಯರು
(2) ಶಿಕ್ಷಕರು
(3) ಸ್ನೇಹಿತರು
(4) ಪೋಷಕರು



www.kpscvaani.com